# 7

# ವಿಧೇಯತೆ

ವಿಧೇಯತೆಯು ದೇವರಿಗಾಗಿ ಒಬ್ಬನು ಮಾಡುವ ಅತೀ ದೊಡ್ಡದಾದ ಉಚಿತವಾದ ತೀರ್ಮಾನವಾಗಿದೆ. ಅನುದಿನದ ನಡೆಯುವಿಕೆಯು ವಿಧೇಯತೆಯ ನಡೆಯುವಿಕೆಯಾಗಿದೆ. ಯೇಸುವು ನಮ್ಮನ್ನು ಹೆಚ್ಚು ದೃಢವಾದ ಜೀವಿತಕ್ಕೆ, ಹೆಚ್ಚು ವಿಧೇಯ ಜೀವಿತಕ್ಕೆ ಹೆಚ್ಚು ಫಲಭರಿತವಾದ ಜೀವಿತಕ್ಕೆ ಕರೆಯುತ್ತಾನೆ. ದೇವರು ಕಾತುಕವಾದದ್ದನ್ನು ಬಯಸುವದಿಲ್ಲ; ಆತನು ವಿಧೇಯತೆಯನ್ನು ಬಯಸುತ್ತಾನೆ. ಆತ್ಮಿಕತೆಯು ದೇವರಿಗೆ ಕೇವಲ ವಿಧೇಯತೆಯಾಗಿದೆ.

ನಮ್ಮ ಶಾಲೆಗಳಲ್ಲಿಯ ದೌರ್ಜನ್ಯದ ಬಗ್ಗೆ ನಾವು ಆಘಾತಕ್ಕೊಳಪಟ್ಟಿದ್ದೇವೆ. ಉತ್ತರವು ಹೆಚ್ಚು ಪೋಲೀಸರು, ಮೆಟಲ್ ಡಿಟೆಕ್ಟರ್ಸ್ ಇಲ್ಲವೇ ಗನ್ ನಿಯಮಗಳಲ್ಲ. ಆದರೆ ಉತ್ತರವು ವಿಧೇಯತೆಯಾಗಿದೆ. ಒಬ್ಬನು ನಡಿಸಬೇಕಾದರೆ ವಿಧೇಯನಾಗುವದನ್ನು ಕಲಿತುಕೊಳ್ಳತಕ್ಕದ್ದು. ಒಬ್ಬನು ನಡಿಸಲು ಅರ್ಹನಾಗಬೇಕೆಂದು ಬಯಸಿದರೆ ಅವನು ಹಿಂಬಾಲಿಸುವದನ್ನು ಕಲಿತುಕೊಳ್ಳತಕ್ಕದ್ದು. ನಾವು ವಿಧೇಯರಾಗುವದನ್ನು ಕಲಿತುಕೊಳ್ಳತಕ್ಕದ್ದು. ವಿಧೇಯರಾಗಲು ನಮ್ಮ ಮಕ್ಕಳಿಗೆ ನಾವು ಬೋಧಿಸತಕ್ಕದ್ದು (ಎಫೆಸ 6:1; 1 ಪೇತ್ರ 1:14). ವಿಧೇಯತೆ ಇಲ್ಲದೇ, ದೌರ್ಜನ್ಯವೂ ಗಲಿಬಿಲಿಯೂ ಮಾತ್ರವೇ ಇರುವುದು. ಇತ್ತೀಚೆಗೆ ಒಬ್ಬ ಆಧುನಿಕ ಮನುಷ್ಯನು ತನ್ನ ಹೊಸ, ಪುಸ್ತಕ, *America's Problem Is Corrective Discipline* ಎಂಬುದನ್ನು ಪ್ರಚಾರ ಮಾಡಲು ಟೆಕ್ಸಾಸಿನ ಡಲ್ಲಾಸನ್ನು ಸಂದರ್ಶಿಸಿದನು. ಶಿಸ್ತು ಕ್ರಮವು ಸಮಸ್ಯೆಯಾಗಿದೆ ಎಂದು ಅವನು ನಂಬುತ್ತಾನೆ! ತಿದ್ದುಪಡಿಯಿಲ್ಲದೇ ಮಕ್ಕಳು ಬೆಳೆಸಲ್ಪಡಬೇಕೆಂದು ಅವನು ಘೋಷಿಸುತ್ತಾನೆ! "ಒಡೆಯನ ಕೈಪಿಡಿಗೆ" (ಬೈಬಲ್‌ಗೆ) ನಾವು ಹಿಂದಿರುಗತಕ್ಕದ್ದು. "ಮೂರ್ಖತನವು ಹುಡುಗನ ಮನಸ್ಸಿಗೆ ಸಹಜ, ಆದರೆ ಶಿಕ್ಷಕನ ಬೆತ್ತವು ಅದನ್ನು ತೊಲಗಿಸುವದು" (ಜ್ಞಾನೋಕ್ತಿ 22:15); "ಬೆತ್ತ ಹಿಡಿಯದ ಪಿತ ಪುತ್ರನಿಗೆ ಶತ್ರು; ಚೆನ್ನಾಗಿ ಶಿಕ್ಷಿಸುವ ಪಿತ ಪುತ್ರನಿಗೆ ಮಿತ್ರ" (ಜ್ಞಾನೋಕ್ತಿ 13:24). ಈ ವಚನಗಳ ಮೇಲೆ ಅವಲಂಭಿಸಿರುವ ಪುರಾತನ ಹೇಳಿಕೆಯ ಮೇಲೆ ನಾನು ಬೆಳೆದನು: "ಬೆತ್ತವನ್ನು ಉಳಿಸು, ಮಗುವನ್ನು ಕೆಡಿಸು" ಶಿಕ್ಷಿಸುವುದು ಪ್ರೀತಿಯಿಲ್ಲದ್ದಾಗಿರ ಬಾರದು; ಅದು ಪ್ರೀತಿಸುವಂಥದ್ದಾಗಿರಬೇಕು.

ಯೇಸುವಿಗೆ "ಕೇಳು" ಮತ್ತು "ವಿಧೇಯನಾಗು" ಎಂಬುದು ಒಂದೇ ಪದವಾಗಿದೆ. ನೀವು ವಿಧೇಯರಾಗುವವರೆಗೆ ನಿಜವಾಗಿಯೂ ಕೇಳಲಾರಿರಿ. "ಯಜ್ಞವನ್ನರ್ಪಿಸುವ ದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ; ಟಗರುಗಳ ಕಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ" (1 ಸಮುವೇಲ 15:22ಬಿ). "ವಿಧೇಯನಾಗು" ಎಂಬ ಗ್ರೀಕ ಪದಕ್ಕೆ "ಕೇಳಿಸಿಕೋ" ಎಂಬರ್ಥವಾಗುತ್ತದೆ "ವಿಧೇಯತೆ" ಎಂಬ ಪದವು "ಕೇಳಿಸಿಕೋ" ಎಂಬ ಲ್ಯಾಟಿನ್ ಮೂಲ ಪದದಿಂದ ಬರುತ್ತದೆ ಎಂದು ನನಗೆ ಹೇಳಲ್ಪಟ್ಟಿದೆ. ಜೀವನದ ಕೆಲವು ದೊಡ್ಡ ತತ್ವಗಳು ಬೋಧಿಸಲ್ಪಡಲಾರವು, ಆದಾಗ್ಯೂ ಅವು - ಕರುಣೆಯಂಥ, ತಾಳ್ಮೆಯಂಥ ಮತ್ತು ತೃಪ್ತಿಯಂಥ ತತ್ವಗಳು ಕಲಿಯಲ್ಪಡಬಹುದು. ಇಬ್ರಿಯ 5:7-9, ಶ್ರಮೆ ತಾಳುವದರಲ್ಲಿ ಯೇಸುವು ವಿಧೇಯತೆಯನ್ನು "ಕಲಿತುಕೊಂಡನು" ಎಂದು ಹೇಳುತ್ತದೆ. ಈ ವಾಕ್ಯಭಾಗವು ಶಿಲುಬೆಯ ಯಜ್ಞಕ್ಕಿಂತ ಹೆಚ್ಚಿನದಾಗಿದೆ ಎಂದು

ಬೋಧಿಸುತ್ತದೆ; ಅದು ವಿಧೇಯತೆಯಾಗಿತ್ತು (ನೋಡಿರಿ ಫಿಲಿಪ್ಪಿ 2:8).

ಬೈಬಲಿನ ವಿಧೇಯತೆಯು ಮೂರು ಅಂಶಗಳನ್ನು ಒಳಗೊಂಡಿರುತ್ತದೆ:

(1) *ಅಧೀನತೆ.* ಹನ್ನೆರಡು ವರುಷದವನಾಗಿದ್ದಾಗ, ಯೇಸುವು ಮನೆಗೆ ಹಿಂದಿರುಗುತ್ತಾನೆ ಮತ್ತು ತನ್ನ ತಂದೆತಾಯಿಗಳಿಗೆ ವಿಧೇಯನಾಗಿ ಉಳಿದುಕೊಂಡನು (ಲೂಕ 2:51). ದೇವರ ಕಡೆಗೆ ಒಬ್ಬನಿಗೆ ಸರಿಯಾದ ಮನೋಭಾವನೆಯಿರುವಾಗ, ಆತನಿಗೆ ವಿಧೇಯನಾಗುವದಕ್ಕೆ ಅವನಿಗೆ ಸಮಸ್ಯೆಯಿರುವದಿಲ್ಲ.

(2) *ನಂಬಿಕೆ.* ಒಂದು ದೊಡ್ಡ ಸಂಗೀತವು, "ನಂಬು ಮತ್ತು ವಿಧೇಯನಾಗು" ಎಂದು ಹೇಳುತ್ತದೆ. ದೇವರು ನಂಬಲರ್ಹನಾಗಿದ್ದಾನೆ. ಬೈಬಲಿನ ನಂಬಿಕೆ ಮತ್ತು ವಿಧೇಯತೆಯು ಒಂದೇ ಸಂಗತಿಯಾಗಿರುತ್ತವೆ. ಅಪನಂಬಿಕೆ ಮತ್ತು ಅವಿಧೇಯತೆ ಒಂದೇ ಸಂಗತಿಯಾಗಿರುತ್ತವೆ (ಇಬ್ರಿಯ 3:12-4:11). ಮನುಷ್ಯರಿಗಲ್ಲ ಆದರೆ ನಾವು ದೇವರಿಗೆ ವಿಧೇಯರಾಗಬೇಕು (ಅಪೊಸ್ತಲರ ಕೃತ್ಯಗಳು 5:29). *ದೇವರು ಮಾಡ ಬೇಕೆಂದು ಹೇಳುವದನ್ನು ಮಾಡು ... ಅದನ್ನು ಮಾಡಬೇಕೆಂದು ಹೇಳುವ ದೇವರ ಉದ್ದೇಶಕ್ಕಾಗಿ ಮಾಡು ... ಯಾಕಂದರೆ ಅದನ್ನು ಮಾಡಬೇಕೆಂದು ದೇವರು ಹೇಳುತ್ತಾನೆ.*

(3) *ಸಂಪೂರ್ಣ ವಿಧೇಯತೆ.* ಭಾಗಶಃ ವಿಧೇಯತೆಯು ಅವಿಧೇಯತೆಯಾಗಿದೆ. (ನೋಡಿರಿ ಅಮಾಲೇಕ್ಯರನ್ನು ನಾಶಪಡಿಸಿದಾಗ ಅರಸ ಸೌಲನ ಭಾಗಶ ವಿಧೇಯತೆಯ ವೃತ್ತಾಂತವನ್ನು ನೋಡಿರಿ; 1 ಸಮುವೇಲ 15:7-26). ದೇವರ ವಿಚಾರಣವಾಗಿರುವಾಗ ಮಾತ್ರವೇ ಒಂದು ವಿಚಾರವು ಒಳ್ಳೆಯ ವಿಚಾರವಾಗಿರುತ್ತದೆ. ನಿಯಮದ ಮಾತಿಗೆ ವಿಧೇಯನಾಗದೆ ನೀನು ನಿಯಮವನ್ನು ಕೈಕೊಳ್ಳಲಾರಿ. ಆಯ್ಕೆ ಮಾಡಿಕೊಂಡ, ವಿಧೇಯತೆಯು ಅವಿಧೇಯತೆಯಾಗಿರುತ್ತದೆ.

## ಶಿಸ್ತು ಮತ್ತು ಕರ್ತವ್ಯ

ಶಿಸ್ತು ದೇವರ ಸ್ವಭಾವವೇ ಆಗಿರುವುದು. ಅನುದಿನದ ನಡೆಯುವಿಕೆಯು ರಸ್ತೆ ಓಟವಾಗಿರುವುದು, ಆದರೆ ಒತ್ತಡವಾಗಿರುವದಿಲ್ಲ. ನಾವು ಯೇಸುವಿನೊಂದಿಗೆ ಸಮಯವನ್ನು ಕಳಿದಿದ್ದೇವೆಂದು ಇತರರಿಗೆ ಸ್ಪಷ್ಟವಾಗಿದೆಯೋ? ನಮ್ಮ ದೈವಜ್ಞಾನ ಶಾಸ್ತ್ರವು ನಮ್ಮ ಆತ್ಮ ಚರಿತ್ರೆಯಾಗತಕ್ಕದ್ದು. ನಮ್ಮ ಅನುದಿನದ ನಡೆಯುವಿಕೆಯು ಸತತವಾದದ್ದು. ಅನುದಿನದ ನಡೆಯುವಿಕೆಯು ವೈಯಕ್ತಿಕವಾದದ್ದು ಆಗಿರುವದಿಲ್ಲ! ಕೆಲಸಮಾಡಲು ನಾವು ಸಿದ್ಧರಾಗಿರದ ಯಾವುದೇ ಸಂಗತಿಗಾಗಿ ನಾವು ಪ್ರಾರ್ಥಿಸಲು ಹೇಗೆ ಧೈರ್ಯಗೊಳ್ಳುವೆವು! ಸ್ಪಷ್ಟಿಸುವಿಕೆ ಮತ್ತು ತಲಾಂತು ಶಿಕ್ಷೆಯಿಲ್ಲದೆ ಸೋತು ಹೋಗುವವು. ಅವಿರತ ಯತ್ನದ ಸ್ಥಳವನ್ನು ಯಾವುದೂ ತೆಗೆದುಕೊಳ್ಳಲಾರದು. ಶಿಕ್ಷೆಯು ಎಂದೂ ಸುಲಭವಾಗಿರುವದಿಲ್ಲ. ಯೇಸುವು ತನ್ನ ಜೀವಿತವನ್ನು *ಜೀವಿಸುವದರಿಂದ* ಮೇಲುಗೈ ಸಾಧಿಸಲಿಲ್ಲ ಆದರೆ ತನ್ನ ಜೀವವನ್ನು *ಕೊಡುವದರಿಂದ* ಸಾಧಿಸಿದನು.

ಅಧೀನತೆಯ, ವಿಧೇಯತೆಯ, ಶಿಕ್ಷೆಯ, ಮತ್ತು ಕರ್ತವ್ಯದ ಪ್ರಮುಖ ತತ್ವಗಳು ಈಗ ಸಮಾಜದಲ್ಲಿ ತೆಗೆದು ಹಾಕಲ್ಪಟ್ಟಿವೆ. ಲೂಕ 17:7-10, ಯೆಸುವು ಕರ್ತವ್ಯದ ಬಗ್ಗೆ ಒಂದು ಚಿಕ್ಕ ಸಾಮ್ಯವನ್ನು ಬೋಧಿಸಿದನು. ನಮ್ಮನ್ನು ಆಘಾತಗೊಳಿಸುವದನ್ನು ಆತನು ನಿಲ್ಲಿಸುವದೇ ಇಲ್ಲ. ಆತನು ಯಜಮಾನನು (ಕರ್ತನು) ವಿಚಾರವಿಲ್ಲದವನಾಗಿದ್ದನೆಂದು ಹೇಳಿದನು. ಇದು "ಕರ್ತವ್ಯವನ್ನು" ಬೋಧಿಸುವ ಕಠಿಣವಾದ ಸಾಮ್ಯವಾಗಿದೆ ಮಿಲಿಟರಿಯಲ್ಲಿ, ಪಂದ್ಯಾಟಗಳಲ್ಲಿ, ಕುಟುಂಬದಲ್ಲಿ, ಒಬ್ಬನ ಉದ್ಯೋಗದಲ್ಲಿ -

ಹೌದು, ಜೀವನದಲ್ಲಿ ತಾನೇ - ಪ್ರಾರಂಭದ ಅಂಶವು ಕರ್ತವ್ಯವಾಗಿದೆ. ಆತ್ಮಿಕತೆಯು ಮುಂದುವರಿಯತಕ್ಕದ್ದು, ಆದಾಗ್ಯೂ ಅದು ಕರ್ತವ್ಯದೊಂದಿಗೆ ಪ್ರಾರಂಭವಾಗುತ್ತದೆ. ಕರ್ತವ್ಯದ ಬಹುಮಾನವು ಹೆಚ್ಚು ಕರ್ತವ್ಯದೊಂದಿಗೆ ಪ್ರಾರಂಭವಾಗುತ್ತದೆ. ಕರ್ತವ್ಯದ ಬಹುಮಾನವು ಹೆಚ್ಚು ಕರ್ತವ್ಯವಾಗಿದೆ. ಒಬ್ಬ "ಉದ್ಯೋಗಸ್ಥನು" ತಾನು ಕೆಟ್ಟದ್ದನ್ನು ಭಾವಿಸುವಾಗ, ತನ್ನ ಉತ್ತಮವಾದದ್ದನ್ನು ಮಾಡುವವನಾಗಿದ್ದಾನೆ. ಕರ್ತವ್ಯವು ಎಂದಿಗೂ ಅಂತ್ಯವಾಗುವದಿಲ್ಲ.

◇◇◇◇◇◇◇◇

# ಪ್ರೀತಿ

## 1 ಕೊರಿಂಥ 13

*"ಶುದ್ಧ ಹೃದಯ ಒಳ್ಳೇ ಮನಸ್ಸಾಕ್ಷಿ ನಿಷ್ಕಪಟವಾದ ನಂಬಿಕೆ ಎಂಬಿವುಗಳಿಂದ ಹುಟ್ಟಿದ ಪ್ರೀತಿಯೇ ದೇವವ್ಯಾಕ್ಯೋಪದೇಶದ ಗುರಿಯಾಗಿದೆ" (1 ತಿಮೊಥೆ 1:5).*

"ಪ್ರೀತಿಯೇ ನಮ್ಮ ದೇವ ವಾಕ್ಯೋಪದೇಶದ ಗುರಿಯಾಗಿದೆ ..." (1 ತಿಮೊಥೆ 1:5). ಪ್ರಿತೀಯು ಜೀವನದಲ್ಲಿ ಮತ್ತು ಕ್ರೈಸ್ತತ್ವದಲ್ಲಿ ಅಂತಿಮ ಒಳ್ಳೆಯದಾಗಿದೆ. "ಹೀಗಿರುವದರಿಂದ ನಂಬಿಕೆ ನಿರೀಕ್ಷೆ ಪ್ರೀತಿ ಈ ಮೂರೇ ನಿಲ್ಲುತ್ತವೆ; ಇವುಗಳಲ್ಲಿ ದೊಡ್ಡದು ಪ್ರೀತಿಯೇ" (1 ಕೊರಿಂಥ 13:13); "... ಇನ್ನೂ ಉತ್ಕೃಷ್ಟವಾದ ಮಾರ್ಗವನ್ನು ನಿಮಗೆ ತೋರಿಸುತ್ತೇನೆ" (1 ಕೊರಿಂಥ 12:31). ಪ್ರೀತಿಯು ಹೆಚ್ಚು ಅತ್ಯುತ್ತಮವಾದ ಮಾರ್ಗವಾಗಿದೆ. ಪ್ರೀತಿಯು ಯಾವಾಗಲೂ ಕ್ರೈಸ್ತತ್ವದೊಂದಿಗೆ ಸಂಬಂಧಿಸಿರುತ್ತದೆ. ಬುದ್ಧಿಸಮ್, ಹಿಂದೂಯಿಸಮ್, ಇಸ್ಲಾಮ್, ಇಲ್ಲವೇ ನ್ಯೂ - ಏಜಿಸಮ್‌ದ ಪ್ರೀತಿಯೊಂದಿಗೆ ಎಂದೂ ಗಲಿಬಿಲಿಮಾಡಿಕೊಳ್ಳಬೇಡಿರಿ. ದೇವರು ಪ್ರೀತಿ ಸ್ವರೂಪನಾಗಿದ್ದಾನೆ (1 ಯೋಹಾನ 4:8, 16). ಯೋಹಾನ 3:16, ಯಾವಾಗಲೂ "ಬೈಬಲಿನಲ್ಲಿ ಸುವರ್ಣ ವಾಕ್ಯ" ಎಂದು ಕರೆಯಲ್ಪಟ್ಟಿದೆ, "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." ದೇವರು ವಿಶ್ವಾಸದ ಗುರಿಯಾಗಿದ್ದಾನೆ; ದೇವರು ನಿರೀಕ್ಷೆಯ ಮೂಲವಾಗಿದ್ದಾನೆ; ಆದರೆ ದೇವರು *ಪ್ರೀತಿಯಾಗಿದ್ದಾನೆ*: "ಪ್ರೀತಿಯು ಎಲ್ಲಾ ಕೃಪೆಗಳ ರಾಣಿಯಾಗಿದೆ: ಅದರ ಮೂಲವು ದೇವರಾಗಿದ್ದಾನೆ. ಅದರ ಮಟ್ಟವು ಯೇಸುವಾಗಿದ್ದಾನೆ. ಅದರ ಅಳತೆಯು ಕಲ್ವಾರಿಯಾಗಿದೆ. ಅದರ ಸೇವೆಯು ನಂಬಿಕೆ. ಅದರ ಪರೀಕ್ಷೆಯು ವಿಧೇಯತೆ" ಎಂದು ಒಬ್ಬರು ಹೇಳಿದ್ದಾರೆ. ಪ್ರೀತಿಯು ನಮ್ಮನ್ನು ಹೆಚ್ಚು ಉನ್ನತ ಮಟ್ಟಕ್ಕೆ ದೇವರ ಉತ್ಕೃಷ್ಟತೆಗೆ ಕರೆಯುತ್ತದೆ. ದೇವರು ನಮ್ಮನ್ನು ಮೊದಲು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ (1 ಯೋಹಾನ 4:10, 11, 19). ಪ್ರೀತಿಸುವುದು ದೇವರನ್ನು ತಿಳಿಯುವುದಾಗಿದೆ; ಪ್ರೀತಿಸದಿರುವುದು ದೇವರನ್ನು ತಿಳಿಯದಿರುವುದಾಗಿದೆ (1 ಯೋಹಾನ 4:7, 8). ನಾವು ಇತರರನ್ನು ನಡಿಸುವ ರೀತಿಯು ದೇವರು ನಮ್ಮನ್ನು ಹೇಗೆ ನಡಿಸಿಕೊಳ್ಳುತ್ತಾನೆ ಎಂಬುದರಿಂದ ಬರುತ್ತದೆ. ಜನರಿಗೆ ಏನು ಮಾಡಬೇಕು ಎಂದು ಹೇಳುವ ಮೊದಲು ದೇವರು ಏನು ಮಾಡಿದನೆಂಬುದನ್ನು ಜನರಿಗೆ ಹೇಳಿರಿ.

## ಪ್ರೀತಿಯು ವ್ಯಾವಹಾರಿಕವಾದದ್ದಾಗಿದೆ

ದೇವರೊಂದಿಗೆ ನಮ್ಮ ಅನುದಿನದ ನಡೆಯುವಿಕೆಯು ಪ್ರೀತಿಯಲ್ಲಿ ನಡೆಯುವಿಕೆಯಾಗಿದೆ. ಕಲ್ವಾರಿಗಿಂತ ಮೊದಲು ಪೇತ್ರನು ಯೇಸುವನ್ನು ಮೂರು ಸಲ ಅಲ್ಲಗಳೆದನು. ಇದಕ್ಕಾಗಿ ಅವನು ಅತ್ತನು (ಲೂಕ 22:62). ಯೇಸುವು ಇದನ್ನು ಹೇಗೆ ಕೈಕೊಂಡನು? ಆತನು ಹೇಗೆ ಪೇತ್ರನನ್ನು ಪುನಃ ಸ್ಥಾಪಿಸಿದನು? ಯೋಹಾನ 21ರ ಅಧ್ಯಯನ ಮಾಡಿರಿ. ಯೇಸುವು ಪೇತ್ರನಿಗೆ ಒಂದೇ ಪ್ರಶ್ನೆಯನ್ನು ಮೂರು ಸಲ ಕೇಳಿದನು: “ನೀನು ನನ್ನನ್ನು ಪ್ರೀತಿಸುತ್ತೀಯೋ?” ಇದು ಪೇತ್ರನನ್ನು ನುಚ್ಚು ನೂರು ಮಾಡಿತು! ಯೇಸುವು ಅವನನ್ನು ಖಂಡಿಸಲಿಲ್ಲ, ಹೆದರಿಸಲಿಲ್ಲ, ಇಲ್ಲವೇ ಶಿಕ್ಷಿಸಲಿಲ್ಲ. ಭಾನುವಾರದಂದು ದೇವಾಲಯಕ್ಕೆ ಹೋಗಿ ಸ್ವಲ್ಪಹಣ ಕೊಡಬೇಕೆಂದು ಹೇಳಲಿಲ್ಲ. ಇದು ಬಹಳ ಸುಲಭವಾದದ್ದಾಗಬಹುದಿತ್ತು! “ನೀನು ನನ್ನನ್ನು ಪ್ರೀತಿಸುತ್ತೀಯೋ?” ಇದು ಜೀವನದಲ್ಲಿ ವಿಷಯವಾಗಿದೆ: ನಾವು ನಿಜವಾಗಿಯೂ ಯೇಸುವನ್ನು ಪ್ರೀತಿ ಸುತ್ತೇವೆಯೋ? ಆತನ ಪ್ರಶ್ನೆಯು ಪೇತ್ರನನ್ನು ಕಠಿಣವಾದ ಸ್ಥಾನದಲ್ಲಿಟ್ಟಿತು; ಅದು ಸಮಾನವಾಗಿ ನಮ್ಮ ಮೇಲೆ ಪರಿಣಾಮ ಮಾಡುತ್ತದೆ. ನಾವು ಪ್ರೀತಿಯಲ್ಲಿ ಬೆಳೆ ಯುತ್ತಿರುವೆವೋ? “ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೇ. ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು” (ಯೋಹಾನ 13:34, 35) ಎಂದು ಯೇಸು ಹೇಳಿದನು. ಪ್ರೀತಿಯು “ಶಿಷ್ಯತ್ವದ ಚಿನ್ಹೆ”ಯಾಗಿದೆ ಎಂದು ಯೇಸುವು ಘೋಷಿಸಿದನು. ಪ್ರೀತಿಯು ಹೊಸದಾದದ್ದಾಗಿರುವದಿಲ್ಲ. ಯೇಸುವು ಪ್ರೀತಿಸಿದಂತೆ ಪ್ರೀತಿಸುವುದು ನೂತನವಾದದ್ದಾಗಿದೆ. ದೈವಜ್ಞಾನ ಶಾಸ್ತ್ರದ ಕ್ಷೇತ್ರದಲ್ಲಿ ಬರೆದ ಎಲ್ಲವನ್ನೂ ಕೆಲವೇ ಪದಗಳಲ್ಲಿ ಸಂಕ್ಷೇಪಿಸಿ ಹೇಳಬೇಕೆಂದು ಕಾರ್ಲ್ ಬಾರ್ತನಿಗೆ ಕೇಳಲಾಯಿತು. “ಯೇಸುವು ನನ್ನನ್ನು ಪ್ರೀತಿಸುತ್ತಾನೆ, ಇದನ್ನು ನಾನು ಬಲ್ಲೆನು, ಯಾಕಂದರೆ ಬೈಬಲು ನನಗೆ ಹಾಗೆ ಹೇಳುತ್ತದೆ”[1] ಎಂದು ಸಂಕ್ಷೇಪಿಸಿ ಹೇಳಿದನು. ಪೌಲನು 1 ಕೊರಿಂಥ 13:4-8ರಲ್ಲಿ ಪ್ರೀತಿಯನ್ನು ವಿವರಿಸಿದನು. ಅವನ ಮಾತುಗಳು ಅಷ್ಟೇ ಸಮನಾಗಿ ಯೇಸುವನ್ನು ವಿವರಿಸುತ್ತವೆ. ಅವು ನಮ್ಮನ್ನೂ ವಿವರಿಸಬೇಕು.

ಯೇಸುವು ಪ್ರೀತಿಸಿದಂತೆ ಪ್ರೀತಿಸಬೇಕೆಂದು ಪೌಲನು ವಿವಾಹವಾದ ಜೊತೆಗಾರರಿಗೆ ಹೇಳಿದನು (ಎಫೆಸ 5:25-33). ಮನೆಯಲ್ಲಿಯ ನಮ್ಮ ಸೋಲು ಗಳು “ಪ್ರೀತಿಯ ಸೋಲುಗಳಾಗಿರುತ್ತವೆ” ನಾವು ಸಹೋದರರನ್ನು ಪ್ರೀತಿಸಬೇಕು (ರೋಮಾಪುರ 12:9, 10; 1 ಥೆಸಲೊನೀಕ 4:9; ಇಬ್ರಿಯ 13:1; 1 ಪೇತ್ರ 1:22; 2:17; 1 ಯೋಹಾನ 4:7; 3:11; 4:11; 2 ಯೋಹಾನ 5). ನಾವು ನಮ್ಮ ನೆರೆಯವರನ್ನು ಪ್ರೀತಿಸಬೇಕು (ಮತ್ತಾಯ 22:34-40; ರೋಮಾಪುರ 13:8-10). ಕಣ್ಣಿಗೆ ಕಾಣುವ ಸಹೋದರರನ್ನು ಪ್ರೀತಿಸದೇ ಇರುವಾಗ ಕಣ್ಣಿಗೆ ಕಾಣದಿರುವ ನಮ್ಮ ದೇವರನ್ನು ನಾವು ಪ್ರೀತಿಸುತ್ತೇವೆಂದು ಹೇಗೆ ಹೇಳಬಹುದು (1 ಯೋಹಾನ 4:19-21)? ದೇವರೊಂದಿಗಿನ ನಮ್ಮ ಪ್ರೀತಿಯ ಸಂಬಂಧವು ನಮ್ಮ ಅನುದಿನದ ನಡೆಯಲ್ಲಿ ಅತೀ ಹೆಚ್ಚು ಮಹತ್ವದ ತತ್ವವಾಗಿದೆ. ದ್ವೇಷವು ತಾನು ಜಯಿಸುವಾಗ ಮಾಡುವದಕ್ಕಿಂತ ಹೆಚ್ಚಾಗಿ ಪ್ರೀತಿಯು ಸೋಲುವಾಗ ಹೆಚ್ಚು ಬಲವನ್ನು ಹೊಂದಿಕೊಳ್ಳುವುದು.

ಕ್ರಿಸ್ತನ ಪ್ರೀತಿಯು ನಮ್ಮನ್ನು ನಿಯಂತ್ರಿಸುತ್ತದೆ (2 ಕೊರಿಂಥ 5:14). ಕ್ರಿಸ್ತನ ಶಿಲುಬೆಯು ನಮ್ಮನ್ನು ಪ್ರೇರೇಪಿಸದಿದ್ದರೆ, ಯಾವುದು ನಮ್ಮನ್ನು ಪ್ರೇರೇಪಿಸುತ್ತದೆ? ಪರಿಶುದ್ಧಾತ್ಮನಿಂದ ದೇವರ ಪ್ರೀತಿರಸವು ಧಾರಾಳವಾಗಿ ಸುರಿಸಲ್ಪಟ್ಟಿದೆ (ರೋಮಾಪುರ

5:5-8). ಕ್ರೈಸ್ತತ್ವವು ಪ್ರೀತಿಯ ಮುಖಾಂತರ ಕಾರ್ಯಮಾಡುವ ನಂಬಿಕೆಯಾಗಿದೆ (ಗಲಾತ್ಯ 5:6). ದ್ರಾಕ್ಷೆ ಬಳ್ಳಿ ಮತ್ತು ಕೊಂಬೆಗಳ ಸಾಮ್ಯದಲ್ಲಿ, "ನನ್ನಲ್ಲಿ ನೆಲೆಗೊಳ್ಳಿರಿ"; "ನನ್ನ ಮಾತುಗಳು ನಿಮ್ಮಲ್ಲಿ ನೆಲೆಗೊಂಡಿರುವವು"; "ನನ್ನ ಪ್ರೀತಿಯಲ್ಲಿ ನೆಲೆಗೊಳ್ಳಿರಿ" ಎಂದು ಯೇಸು ಹೇಳಿದನು (ಯೋಹಾನ 15:1-13). ಪ್ರೀತಿಯು ಧರ್ಮಶಾಸ್ತ್ರವನ್ನು ನೆರವೇರಿಸುತ್ತದೆ (ರೋಮಾಪುರ 13:10). ಪ್ರೀತಿಯ ಸತ್ವ ಪರೀಕ್ಷೆಯು ಸರಳವಾದ ವಿಧೇಯತೆಯಾಗಿದೆ. "ನೀವು ನನ್ನನ್ನು ಪ್ರೀತಿಸಿದರೆ, ನೀವು ನನ್ನ ಆಜ್ಞೆಗಳನ್ನು ಕೈಕೊಳ್ಳುವಿರಿ" ಎಂದು ಯೇಸು ಹೇಳಿದನು (ಯೋಹಾನ 14:15; ನೋಡಿರಿ ವಚನ 23). ಕ್ರೈಸ್ತ ಜೀವಿತವು ಎಂದೂ ಸುಲಭವಾಗಿರುವದಿಲ್ಲ, ಮತ್ತು ಯಾವಾಗಲೂ ಸಂತೋಷಕರವಾದದ್ದಾಗಿರುವದಿಲ್ಲ, ಆದರೆ ಅದು ಪ್ರೀತಿಯಲ್ಲಿ ಜೀವಿಸಲ್ಪಡುತ್ತದೆ.

ಚರಿತ್ರೆಯ ಯಾವುದೇ ಸಮಯದಲ್ಲಿ ಯೇಸುವಿನ ಬೋಧನೆಗಳು ಅಲಕ್ಷಿಸಲ್ಪಟ್ಟಿರುವಾಗ, ಅಷ್ಟು ಬಹಳವಾಗಿ ಆತನು ಹೇಳಲ್ಪಟ್ಟಿರುವದಿಲ್ಲ. ಯೇಸುವಿನಲ್ಲಿ ನಂಬುವುದು ಅಂದರೆ ಯೇಸುವು ನಂಬಿದ್ದನ್ನು ಮತ್ತು ಆತನು ಬೋಧಿಸಿದ್ದನ್ನು ನಂಬುವುದಾಗಿದೆ. ಕ್ರಿಸ್ತನ ಪ್ರೀತಿಯು ಕ್ರಿಸ್ತನ ಶಿಲುಬೆಯ ಬಳಿಯಲ್ಲಿ ಕಂಡುಕೊಳ್ಳಲ್ಪಟ್ಟಿದೆ. ಬೈಬಲಿನ ಪ್ರೀತಿಯು "ಕಠಿಣವಾದ ಪ್ರೀತಿ" ಆಗಿದೆ. ಶಿಕ್ಷಿಸುವಂಥದ್ದು ದೇವರ ಸ್ವಭಾವವೇ ಆಗಿರುತ್ತದೆ. ನಮ್ಮ ಪ್ರೀತಿಸುವ ದೇವರು ಕೊಡುತ್ತಾನೆ ಮತ್ತು ತ್ಯಾಗ ಮಾಡುತ್ತಾನೆ. ಉಳಿದುಕೊಳ್ಳುವ ವಿಷಯವು ಪ್ರೀತಿಯಾಗಿರುತ್ತದೆ. "ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆಬರಲಿ. ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು" (ಮತ್ತಾಯ 16:24, 25).

ಪ್ರೀತಿಯು ಎಂದೂ ಸೋತು ಹೋಗುವದಿಲ್ಲ (1 ಕೊರಿಂಥ 13:8)! ಎಂಥಾ ಹೇಳಿಕೆ! ಪ್ರೀತಿಯು ಎಂದೂ ಸೋತು ಹೋಗುವದಿಲ್ಲ; ನಾವು ಪ್ರೀತಿಯನ್ನು ಸೋಲುವಂತೆ ಮಾಡುತ್ತೇವೆ. "ದೇವರು ಪ್ರೀತಿಸ್ವರೂಪಿ; ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ, ದೇವರು ಅವನಲ್ಲಿ ನೆಲೆಗೊಂಡಿದ್ದಾನೆ" (1 ಯೋಹಾನ 4:16ಬಿ).

## ಪ್ರೀತಿಯು ಏನಾಗಿದೆ

ಪ್ರೀತಿಯ ಮೇಲೆ ಜಗತ್ತು ಹುಚ್ಚುತನದ್ದಾಗಿದೆ. *ಪ್ರೀತಿ - ಪ್ರೀತಿ - ಪ್ರೀತಿ!* "ಈಗ ಜಗತ್ತಿಗೆ ಅಗತ್ಯತೆಯಿರುವುದು ಪ್ರೀತಿ, ಮಧುರವಾದ ಪ್ರೀತಿ" ಎಂದು ಒಂದು ಸಂಗೀತ ಹೇಳುತ್ತದೆ. ಪ್ರತಿಯೊಂದಕ್ಕೂ ಪ್ರೀತಿಯು ಉತ್ತರವಾಗಿದೆ. ಅದನ್ನು ಹಗಲೂ ರಾತ್ರಿಯೂ ಕೇಳುತ್ತಿರುವಿರಿ. ಪ್ರೀತಿಯು ಎಲ್ಲಿದೆ? ಜಗತ್ತು ಯುದ್ಧದಲ್ಲಿದೆ; ಹಿಂಸೆಯು ಬೆಳೆಯುತ್ತಲಿದೆ; ಜಗತ್ತು ಗಂಡಾಂತರಕಾರಿಯಾದದ್ದಾಗಿದೆ! ವಿವಾಹ ವಿಚ್ಛೇದನವು ಅತಿಯಾಗಿದೆ. ನಾಸ್ತಿಕರ ಮಧ್ಯದಲ್ಲಿಗಿಂತ ಸಭೆಯ ಸದಸ್ಯರಲ್ಲಿ ವಿವಾಹ ವಿಚ್ಛೇದನವು ಹೆಚ್ಚಿನ ಸಂಖ್ಯೆಯಲ್ಲಿದೆ ಎಂದು ಒಂದು ಸಮೀಕ್ಷೆ ಹೇಳಿತು! ಮಕ್ಕಳ ದುರ್ಬಳ ... ಡ್ರಗ್ಸ್ ... ಅಪರಾಧ ... ಕೊಲೆಗಳು ... ಪ್ರೀತಿಯು ಎಲ್ಲಾ ಕಡೆಗಳಲ್ಲಿದ್ದರೆ, ಇದನ್ನು ಮೌನಗೊಳಿಸಲ್ಪಡಬಹುದಿತ್ತು! ಅನೈತಿಕತೆ, ಲಂಪಟ ಸಾಹಿತ್ಯ ಮತ್ತು ಅಶ್ಲೀಲತೆಯು ಹೆಚ್ಚಾಗುತ್ತಲಿದೆ. ಗೌರವದ ನಿಚ್ಚಣಿಕೆಯಲ್ಲಿ ಪ್ರಸಂಗಿಗಳು ರಾಜಕೀಯ ವ್ಯಕ್ತಿಗಳಿಗಿಂತ ಕೇವಲ ಒಂದು ಹಂತ ಮೇಲಿದ್ದಾರೆ! ಪ್ರೀತಿಯು ಉತ್ತರವಾಗಿದೆ, ಆದರೆ ಪ್ರೀತಿಯು ಆಚರಿಸಲ್ಪಡುತ್ತಿಲ್ಲ.

ಪ್ರೀತಿಯು ಏನಾಗಿದೆ? "*ನಿಜವಾದ* ಪ್ರೀತಿಯು ಏನಾಗಿದೆ?" ಎಂದು ನಾವು ಕೇಳು

ವಾಗ, ಸಮಸ್ಯೆಯು ಸ್ಪಷ್ಟವಾಗುತ್ತದೆ. ನನಗೆ ಹೇಳಿರಿ! ನಾನು ಒಂದು ಉತ್ತರವನ್ನು ಕೇಳುತ್ತೇನೆ. ಯೋಚಿಸಿರಿ. ಉತ್ತರ ಕೊಡಿರಿ. ಸಂಕ್ಷಿಪ್ತವಾಗಿರ್ರಿ. ಪ್ರೀತಿಯು ಏನಾಗಿದೆ ಎಂದು ನನಗೆ ಹೇಳಿರಿ. ಅದರ ಬಗ್ಗೆ ನೀವೆಂದಾದರೂ ಯೋಚಿಸಿರುವದಿಲ್ಲವೋ? ಪ್ರೀತಿಯು ನಿಜವಾ ಗಿಯೂ ಏನಾಗಿರುವುದೆಂಬುದರ ಬಗ್ಗೆ ನಮ್ಮ ಸಂಸ್ಕೃತಿಯಲ್ಲಿ ಕುರುಹು ಇರುವುದಿಲ್ಲ! ಸಭೆಯು ಹೆಚ್ಚು ಉತ್ತಮವಾಗಿರುವುದೋ? ನಾವು ಮೋಸ ಗೊಳಿಸಲ್ಪಟ್ಟಿದ್ದೇವೆ. ಪ್ರೀತಿಯು ಏನಾಗಿದೆಯೋ ಎಂದು ಬೋಧಿಸಲ್ಪಡದೇ ಪ್ರೀತಿಯ ಬಗ್ಗೆ ನಾವು ಬೋಧಿಸಲ್ಪಟ್ಟಿದ್ದೇವೆ. ಪ್ರೀತಿಯು ಏನಾಗಿದೆ ಎಂಬುದನ್ನು ನೀವು ತಿಳಿಯದಿದ್ದರೆ, ಅದು ನಿಮ್ಮಲ್ಲಿ ಹೇಗಿರುವುದು, ಹೇಗೆ ಅದನ್ನು ರೂಡಿಪಡಿಸುವಿರಿ, ಹೇಗೆ ಅದನ್ನು ಜೀವಿ ಸುವಿರಿ? ನಿಜವಾದ ಪ್ರೀತಿಯು ಹೇಗೆ ಕಾಣಿಸಿಕೊಳ್ಳುತ್ತದೆ? ನಿಜವಾದ ಪ್ರೀತಿಯು ಏನನ್ನು ಮಾಡುತ್ತದೆ? ನಿಜವಾದ ಪ್ರೀತಿಯು ಏನನ್ನು ಮಾಡುವದಿಲ್ಲ? ಈ ಪ್ರಶ್ನೆಗಳನ್ನು ಪ್ರಾಮಾಣಿಕತೆಯಿಂದಲೂ, ಬೈಬಲಿಗನುಗುಣವಾಗಿಯೂ ಯೋಚಿಸಲ್ಪಡತಕ್ಕದ್ದು. ಸುಳ್ಳು ಪ್ರೀತಿಯು ಕೆಟ್ಟವಿಷಯಗಳನ್ನು ಇನ್ನೂ ಹೆಚ್ಚು ಕೆಟ್ಟವುಗಳನ್ನಾಗಿ ಮಾಡುವುದು.

ಪ್ರೀತಿಯಲ್ಲಿ ಬೆಳವಣಿಗೆಯು ''ದೇವರ ವಿಷಯ''ವಾಗಿದೆ. ಪ್ರೀತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಒಬ್ಬನು ದೇವರನ್ನು ಅರ್ಥಮಾಡಿಕೊಳ್ಳಬೇಕು. ದೇವರು ಪ್ರೀತಿ ಆಗಿದ್ದಾನೆ - ಆದರೆ ಪ್ರೀತಿಯು ದೇವರಾಗಿರುವದಿಲ್ಲ! ಪ್ರೀತಿಯು ನಮ್ಮ ಮೂರ್ತಿಯಾಗಬಾರದು. ಪ್ರೀತಿಯು ಒಂದು ದೇವರಾಗುವಾಗ ಅದು ಒಂದು ದೆವ್ವ ವಾಗುವುದು. ಪ್ರೀತಿಯೂ ಸಹ ದೇವರಿಗೆ ವಿರುದ್ಧವಾಗಿ ಎಂದೂ ಸ್ಪರ್ಧಿಸಬಾರದು. ನಮ್ಮ ಸಂಸ್ಕೃತಿಯು, ತನ್ನ ಸ್ವಂತ ಸ್ವಭಾವದಿಂದ, ಒಂದೇಯಾದ, ಎಲ್ಲವನ್ನೂ ಒಳಗೊಂಡಿರುವ ಅಧಿಕಾರದ ವಿಚಾರಕ್ಕೆ ವಿರುದ್ಧವಾಗಿ ಒಂದು ಹಲ್ಲೆಯಾಗಿದೆ. ದೇವರು "ಇಸ್ರಾಯೇಲಿನಲ್ಲಿ ಒಬ್ಬ ಪರಿಶುದ್ಧನಾದಾತನು" ಆಗಿರುವದಿಲ್ಲ. ದೇವರ ಬಗ್ಗೆ ಇಡೀ ಸತ್ಯಕ್ಕೆ ಪರ್ಯಾಯವಾಗಿ ಸತ್ಯದ ಭಾಗವು ಇಡಲ್ಪಡುವಾಗ ಪ್ರೀತಿಯು ವಿಗ್ರಹಾ ರಾಧನೆಯಾಗುವುದು. ದೇವರು ಪ್ರೀತಿಯನ್ನು ನಿರೂಪಿಸುತ್ತಾನೆ; ಪ್ರೀತಿಯು ದೇವರನ್ನು ನಿರೂಪಿಸುವದಿಲ್ಲ. ನಮಗೆ ಹೊಂದಿಕೊಳ್ಳುವಂತೆ ನಾವು ಪ್ರೀತಿಯನ್ನು ನಿರೂಪಿಸುವಾಗ, ನಮಗೆ ಹೊಂದಿಕೊಳ್ಳು ವಂತೆ ನಾವು ದೇವರನ್ನು ನಿರೂಪಿಸುತ್ತೇವೆ. ಎರಡುಸಾವಿರ ವರ್ಷಗಳನಂತರ, ಕ್ರೈಸ್ತರು ದೇವರ ಮೇಲೆ ಮತ್ತು ಪ್ರೀತಿಯ ಮೇಲೆ ಪರಿಣಿತರಾಗ ಬೇಕು.

ಬೈಬಲಿನ ಪ್ರೀತಿಯು ಉದ್ವೇಗದ ಪ್ರೀತಿಯಾಗಿರುವದಿಲ್ಲ. ಗ್ರೀಕ ಪದವು *agape*. ಅದು ಚಿತ್ತದಿಂದ ಬರುತ್ತದೆ; ಅದು ಒಂದು ಆಯ್ಕೆ, ಒಂದು ತೀರ್ಮಾನ, ಒಂದು ಸಮರ್ಪಣೆ ಆಗಿರುತ್ತದೆ. ಬೈಬಲಿನ ಪ್ರೀತಿಯು ಆಜ್ಞಾಪಿಸಲ್ಪಟ್ಟಿದೆ; ಭಾವೋದ್ವೇಗದ ಪ್ರೀತಿಯು (ಒಬ್ಬನನ್ನು ಮೆಚ್ಚಿಕೊಳ್ಳುವುದು) ಆಜ್ಞಾಪಿಸಲ್ಪಡಲಾರದು. ಇತರರು ಅವರು *ಏನಾಗಿದ್ದಾರೆಂಬ* ಕಾರಣದಿಂದ ಪ್ರೀತಿಸುವುದಿಲ್ಲ ಆದರೆ ನಾವು *ಯಾರಾಗಿದ್ದೇವೆ* ಎಂಬ ಕಾರಣದಿಂದ ಅವರನ್ನು ಪ್ರೀತಿಸುತ್ತೇವೆ. ಕ್ರೈಸ್ತರು ವೈರಿಗಳನ್ನು ಸಹ ಪ್ರೀತಿಸ ಬೇಕೆಂದು ಆಜ್ಞಾಪಿಸಲ್ಪಟ್ಟಿದ್ದಾರೆ (ಮತ್ತಾಯ 5:44). ಪ್ರೀತಿಯನ್ನು ಎಂದೂ ಭಾವಾತಿರೇಖವುಳ್ಳ ಹುಚ್ಚುತನವನ್ನಾಗಿ ಮಾಡಬೇಡಿರಿ. ಪ್ರೀತಿಯನ್ನು ಸಹನೆಯೊಂದಿಗೆ ಎಂದೂ ಗಲಿಬಿಲಿಗೊಳಿಸಬೇಡಿರಿ. ಎಂದೂ ಬಲೆಯೊಳಗೆ ಬೀಳ ಬೇಡಿರಿ: "ನೀವು ನನ್ನನ್ನು ಪ್ರೀತಿಸಿದರೆ, ನೀವು ನನ್ನ ನಡತೆಯನ್ನು ಒಪ್ಪಿಕೊಳ್ಳುವಿರಿ"; "ನೀವು ನನ್ನನ್ನು ಪ್ರೀತಿಸಿದರೆ, ನೀವು ನನ್ನೊಂದಿಗೆ ಒಪ್ಪಿಕೊಳ್ಳುವಿರಿ"; "ನೀವು ನನ್ನನ್ನು ಪ್ರೀತಿ ಸಿದರೆ ನನಗೆ ನನ್ನ ಮಾರ್ಗಗಳಿರುವಂತೆ ಬಿಡುವಿರಿ." ಇದು ಪ್ರೀತಿಯನ್ನು ಕಾಯುವ ತನಕ್ಕೆ ಕೆಳಗಿಳಿಸುತ್ತದೆ. ಬೈಬಲಿನ ಪ್ರೀತಿಯು ಭ್ರಮೆಯನ್ನು ಭಾವನೆಗ ಳನ್ನು, ಪ್ರೇರಣೆಗ

ಳನ್ನು ಮತ್ತು ಹಸಿವೆಗಳನ್ನು ಅನುಸರಿಸುವದಿಲ್ಲ. ಬೈಬಲಿನ ಪ್ರೀತಿಯು ಒಂದು "ಅನುಭವ" ವಾಗಿರುವದಿಲ್ಲ. ಸಭೆಯು ಸಹೋದರರು ಒಬ್ಬರನ್ನೊಬ್ಬರು ಹೇಗೆ ಪ್ರೀತಿಸಬೇಕು ಮತ್ತು ಒಂದಾಗಿ ಜೀವಿಸಬೇಕು ಎಂಬುದನ್ನು ಕಲಿಯುವ ಪ್ರಯೋಗಾಲಯವಾಗಬೇಕು, ಸಭೆಯು ಇಲ್ಲಿ ನಮ್ಮನ್ನು ಸೈತಾನನಿಂದ ರಕ್ಷಿಸುವದಕ್ಕೆ ಮಾತ್ರವಲ್ಲದೆ ನಮ್ಮನ್ನು ನಮ್ಮಿಂದ ರಕ್ಷಿಸುವದಕ್ಕಾಗಿಯೂ ಇರುವುದು. ನಮ್ಮ ಅತೀ ದೊಡ್ಡ ಅವಕಾಶವು, "ಪ್ರೀತಿಯಲ್ಲಿ ಸತ್ಯವನ್ನು ಮಾತಾಡುವುದಾಗಿದೆ" (ಎಫೆಸ 4:15).

## ಪ್ರೀತಿಯ ಪ್ರಾಧಾನ್ಯತೆಗಳು

ಇಂದು ಜನರು ಪ್ರೀತಿಯನ್ನು ಹುಚ್ಚುತನಕ್ಕೆ ಕೆಳಗಿಳಿಸಿರುವದಲ್ಲದೇ, ಪ್ರೀತಿಯ ಪ್ರಾಧಾನ್ಯತೆಗಳನ್ನು ಗ್ರಹಿಸಿಕೊಳ್ಳುವದರಲ್ಲಿ ಸೋತೂ ಹೋಗಿದ್ದಾರೆ:

1. ದೇವರು
2. ಕುಟುಂಬ
3. ಸ್ವಂತ
4. ಇತರರು
5. ವೈರಿಗಳು

ಪಾಪವು ಧರ್ಮಶಾಸ್ತ್ರವನ್ನು ಮೀರಿನಡೆಯುವದಾಗಿದೆ (1 ಯೋಹಾನ 3:4; ನೋಡಿರಿ 4:15); ಪಾಪವು ತಪ್ಪಾಗಿಟ್ಟ ಪ್ರಾಧಾನ್ಯತೆಗಳಾಗಿವೆ. ನಮ್ಮ ಅನುದಿನದ ಹೆಚ್ಚಾದ ತೊಂದರೆಗಳು ಅಪರಾಧತ್ವಗಳಿಂದ ಬಂದವುಗಳಾಗಿರುವದಿಲ್ಲ; ಹೆಚ್ಚಾದವುಗಳು ತಪ್ಪಾಗಿಡಲ್ಪಟ್ಟ ಒಳ್ಳೆಯ ಸಂಗತಿಗಳಾಗಿವೆ. ದೇವರು ನಂಬರ್ 1 ಆಗಿದ್ದಾನೆ. " 'ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಆತ್ಮದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು' ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು" (ಮತ್ತಾಯ 22:37, 38). ನಾವಿರುವ ಎಲ್ಲದ್ದರಿಂದಲೂ ನಮಗೆ ಇರುವ ಎಲ್ಲದರಿಂದಲೂ ನಾವು ದೇವರನ್ನು ಪ್ರೀತಿಸಬೇಕು. ಪ್ರೀತಿಯು ಉತ್ತರವಾಗಿದೆ ಯಾಕೆಂದರೆ ಅದು ನಮ್ಮ ಪ್ರಾಧಾನ್ಯತೆಗಳನ್ನು ಸರಿಯಾಗಿ ಇಡುತ್ತದೆ. "ಯಾವನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ ಹೆಂಡತಿ ಮಕ್ಕಳು ಅಣ್ಣ ತಮ್ಮಂದಿರು ಅಕ್ಕ ತಂಗಿಯರು ಇವರನ್ನೂ ತನ್ನ ಪ್ರಾಣವನ್ನು ಸಹ ಹಗೆ ಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು" (ಲೂಕ 14:26). ಆತನ ಹೇಳಿಕೆಯು ಆಘಾತಕರವಾದದ್ದಾಗಿದೆಯೋ? ಹೌದು! ಅದು ವ್ಯಾವಹಾರಿಕವಾದದ್ದೂ? ಹೌದು! ಇದು ಭಾವೋದ್ವೇಗದ ಪ್ರೀತಿ/ದ್ವೇಷ *ಆಗಿರುವದಿಲ್ಲ.* ಒಂದನ್ನು ಆಯ್ಕೆ ಮಾಡುವುದು ಇನ್ನೊಂದನ್ನು ತಿರಸ್ಕರಿಸುವುದಾಗಿದೆ.

ನಂಬರ್ 1ನ್ನು ಮೂರನೆಯ ಸ್ಥಾನದಲ್ಲಿ, ಇಲ್ಲವೇ ನಂಬರ್ 5ನ್ನು ಎರಡನೆಯ ಸ್ಥಾನದಲ್ಲಿ, ಇಲ್ಲವೇ ನಂಬರ್ 3ನ್ನು ಎರಡನೆಯದಾಗಿ ಇಡಬೇಡಿರಿ! ಚಿಕ್ಕ ಸಂಗತಿಗಳು ದೊಡ್ಡ ಸಂಗತಿಗಳಿಗಿಂತ ತೀರ್ಮಾನಿಸಲ್ಪಡತಕ್ಕದ್ದು. ನಾವು ಕುಟುಂಬಕ್ಕಾಗಿ ಒದಗಿಸತಕ್ಕದ್ದು (1 ತಿಮೊಥೆ 5:8), ಆದರೆ ಅದು ಮಕ್ಕಳನ್ನು ಮೂರ್ತಿಗಳನ್ನಾಗಿ ಮಾಡುವ ಶೋಧನೆಯಾಗಿದೆ. ಕುಟುಂಬದ ಮೇಲೆ ಕೇಂದ್ರೀಕರಿಸಬೇಡಿರಿ; ದೇವರ ಮೇಲೆ ಕೇಂದ್ರೀಕರಿಸಿರಿ. ಇದು ಪ್ರಾಧಾನ್ಯತೆಯ ಹೋರಾಟವನ್ನು ಪರಿಹರಿಸುತ್ತದೆ.

ನಮಗೆ ಕುಟುಂಬದ, ಸ್ವಂತದ, ಮತ್ತು ನಾವು ವೈರಿಗಳಾಗಿರಬೇಕಾಗಿರದ ಇತರರ ಕಡೆಗೆ ಜವಾಬ್ದಾರಿಕೆ ಇರುತ್ತದೆ. ಇದು ಜ್ಞಾನವಾಗಿದೆ. ಪ್ರೀತಿಯ ಪ್ರಾಧಾನ್ಯತೆಗಳು ಪ್ರೀತಿಯನ್ನು ಭೂಲೋಕದ ಮೇಲೆ ಅತೀ ಹೆಚ್ಚಾದ ವ್ಯಾವಹಾರಿಕ ಸಂಗತಿಯನ್ನಾಗಿ ಮಾಡುತ್ತದೆ. ಕೆಲವು ಸಲ ಅದು ಮೊದಲನೆಯ ಸಂಗತಿಗಳನ್ನು ಮೊದಲು ಇಡಲು ಸುಲಭವಾಗಿರುತ್ತದೆ. ಆದರೆ ನಂತರದ ಸಂಗತಿಗಳನ್ನು ನಂತರದಲ್ಲಿ ಅಲ್ಲ. ಇದು ನಮ್ಮ ಅನುದಿನದ ನಡೆಯುವಿಕೆಯಲ್ಲಿ ನಮ್ಮ ಅನುದಿನದ ಸಮಸ್ಯೆಯಾಗಿದೆ.

## ಶರತ್ತು ಇಲ್ಲದ ಪ್ರೀತಿಯು ಶರತ್ತುಳ್ಳದ್ದಾಗಿದೆ

ಪ್ರೀತಿಯು "ಒಳಗೆ" ಇರುತ್ತದೆ; ಶರತ್ತು ಇಲ್ಲದ ಪ್ರೀತಿಯು "ಒಳಗೆ - ಒಳಗೆ - ಒಳಗೆ!" ಇರುತ್ತದೆ. ಅದಿಲ್ಲದೇ ಮಾತಿನ ಪ್ರದರ್ಶನಗಳು (ವಿಚಾರದ ಪ್ರದರ್ಶನಗಳಲ್ಲ) ಅಸ್ತಿತ್ವದಲ್ಲಿ ಇರಲಾರವು. ಹೌದು, ದೇವರು ಪ್ರೀತಿಯಾಗಿದ್ದಾನೆ. ದೇವರ ಪ್ರೀತಿಯು ಸಂಪಾದಿಸಲ್ಪಡಲಾಗದು, ಅರ್ಹತೆಯಿಂದ ಬರಲಾಗದು ಇಲ್ಲವೇ ಕೊಂಡುಕೊಳ್ಳಲ್ಪಡಲಾಗದು ದೇವರು ನಮ್ಮನ್ನು ಹೆಚ್ಚು ಪ್ರೀತಿಸಲಾರನು; ಆತನು ನಮ್ಮನ್ನು ಕಡಿಮೆ ಪ್ರೀತಿಸಲಾರನು. ಅನರ್ಹವಾದ ಪ್ರೀತಿಯನ್ನು ಶರತ್ತು ಇಲ್ಲದ ಪ್ರೀತಿಯೊಂದಿಗೆ ಗಲಿಬಿಲಿಪಡಿಸಬೇಡಿರಿ. ನಾವು ಯಾರನ್ನಾದರೂ ಪ್ರೀತಿಸುವದಕ್ಕಿಂತ ಹೆಚ್ಚಾಗಿ ದೇವರು ಪ್ರತಿಯೊಬ್ಬರನ್ನೂ ಪ್ರೀತಿಸುತ್ತಾನೆ. ದೇವರ ಕೃಪೆಯು ರಕ್ಷಣೆಯನ್ನು ಪರಿಚಯಿಸಿತು; ದೇವರ ಪ್ರೀತಿಯು ದೇವರ ಕುರಿಮರಿಯನ್ನು ಒದಗಿಸಿತು. ಪಾಪಿಗಳು ಬಯಸಲಿ ಇಲ್ಲವೇ ಬಯಸದಿರಲಿ ಅವರಿಗೆ ರಕ್ಷಣೆಯು ಕೊಡಲ್ಪಟ್ಟಿತು. ಇವು ಪಾಪಿಗಳ ಮೇಲೆ ಪ್ರೀತಿಯು ಮಾಡಿದ ದೀನತೆಯ ಪರಿಣಾಮವಾಗಿದೆ. ನಾವು ನಿತ್ಯವಾಗಿ ಕಳೆದು ಹೋಗಿದ್ದೇವೆ ಮತ್ತು ನಮ್ಮನ್ನು ನಾವು ರಕ್ಷಿಸಿಕೊಳ್ಳಲಾರೆವು.

ಶರತ್ತು ಇಲ್ಲದ ಪ್ರೀತಿಯನ್ನು ಶರತ್ತು ಇಲ್ಲದ ಅನ್ಯೋನ್ಯತೆಯೊಂದಿಗೆ ಗಲಿಬಿಲಿಪಡಿಸಬೇಡಿರಿ. ಲೂಕ 15ರಲ್ಲಿ ತಪ್ಪಿಹೋದ ಮಗನು ತನ್ನ ಮನಸ್ಸಿಗೆ ಬಂದಂತೆ ಪಾಪ ಮಾಡಲು ಮನೆಯಲ್ಲಿ ಇರಲಿಕ್ಕೆ ಆಗುವದಿಲ್ಲವೆಂದು ತಿಳಿದಿದ್ದನು. ದೇವರು ಅವನನ್ನು ಮನೆಯಲ್ಲಿ, ದೂರದ ಪ್ರದೇಶದಲ್ಲಿ, ಮತ್ತು ಹಿಂದಿರುಗಿ ಮನೆಯಲ್ಲಿ ಪ್ರೀತಿಸಿದನು. ಪ್ರೀತಿಯು ವಿಷಯವಾಗಿರಲಿಲ್ಲ ಶರತ್ತುಗಳಿಲ್ಲದೆ ಪ್ರೀತಿಸುವುದು ವಿಶ್ವವ್ಯಾಪಕತ್ವವಾಗಿದೆ (ಅವರು ಹೇಗೆಯೇ ಜೀವಿಸಲಿ ಇಲ್ಲವೇ ದೇವರಿಗೆ ಪ್ರತ್ಯುತ್ತರ ಕೊಡಲಿ ಎಲ್ಲರೂ ರಕ್ಷಿಸಲ್ಪಡುವರು ಎಂಬ ವಿಚಾರ). ದೇವರು ಬೆಳಕಾಗಿದ್ದಾನೆ (1 ಯೋಹಾನ 1:5). ಬೆಳಕು ಕತ್ತಲೆಯೊಂದಿಗೆ ಅನ್ಯೋನ್ಯತೆಯಲ್ಲಿ ಇರುವದಿಲ್ಲ. ಸೈತಾನನೊಂದಿಗೆ ನೀವು ಕ್ರಿಸ್ತನ ಮೇಜಿನ ಬಳಿಯಲ್ಲಿ ಕುಳಿತುಕೊಳ್ಳಲಾರಿರಿ (1 ಕೊರಿಂಥ 10:21). ಕ್ರಿಸ್ತನು ಮತ್ತು ದೆವ್ವಗಳು ಮಿಶ್ರವಾಗುವದಿಲ್ಲ (2 ಕೊರಿಂಥ 6:14-16). ಬೆಳಕಿನಲ್ಲಿ ನಾವು ನಡೆಯುವಾಗ ಮಾತ್ರವೇ ಅನ್ಯೋನ್ಯತೆಯು ಬರುವುದು (1 ಯೋಹಾನ 1:7). ಶಿಲುಬೆಯ ಬಳಿಯಲ್ಲಿ ಬಿಟ್ಟು ದೇವರು ನಮ್ಮನ್ನು ಸ್ವೀಕರಿಸುವದಿಲ್ಲ ಮತ್ತು ನಮ್ಮನ್ನು ಕ್ಷಮಿಸುವದಿಲ್ಲ. ಯೇಸುವಿನ ಶಿಲುಬೆಯು ಅಗತ್ಯವಾಗಿದ್ದರೆ, ಆಗ ಅನರ್ಹರಿಗಾಗಿರುವುದು ಆದರೆ ಶರತ್ತಿನಿಂದ ಕೂಡಿರುವುದು.

ದೇವರ ಎಲ್ಲಾ ವಾಗ್ದಾನಗಳು ಶರತ್ತುಗಳಿಂದ ಕೂಡಿವೆ. ಒಂದು ವರವು (2 ಕೊರಿಂಥ 9:15) ಎರಡು ಸಂಗತಿಗಳನ್ನು ಹೊಂದಿಕೊಂಡಿರುತ್ತವೆ: (1) ಒಬ್ಬ ಕೊಡು ವಾತನನ್ನು ಮತ್ತು (2) ಒಬ್ಬ ಸ್ವೀಕರಿಸುವಾತನನ್ನು. *ಎರಡು!* ತೆಗೆದುಕೊಳ್ಳದ ಯಾವನಿಗಾದರೂ

ನೀವು ಏನನ್ನಾದರೂ ಕೊಡಲಾರಿರಿ. ವರವು ಅನರ್ಹವಾದದ್ದಾಗಿದೆ. ವರವು ಸ್ವೀಕರಿಸಲ್ಪಡತಕ್ಕದ್ದು. ನಾವೇನು ಆಗಿರುವದಕ್ಕಾಗಿ ದೇವರು ನಮ್ಮನ್ನು ಪ್ರೀತಿಸುವದಿಲ್ಲ; ನಾವೇನಾಗಿರುವೆವೋ ಅದಾಗಿರದಿದ್ದರೂ ಆತನು ನಮ್ಮನ್ನು ಪ್ರೀತಿಸುತ್ತಾನೆ. ಎಲ್ಲರಿಗಾಗಿ ದೇವರು ರಕ್ಷಣೆಯನ್ನು ಬಯಸುತ್ತಾನೆ ಮತ್ತು ಒದಗಿಸುತ್ತಾನೆ (2 ಪೇತ್ರ 3:9; 1 ತಿಮೊಥೆ 2:4). ಹೀಗಿದ್ದರೂ, ದೇವರು ನಮ್ಮ ಮೇಲೆ ರಕ್ಷಣೆಯನ್ನು ಒತ್ತಾಯವಾಗಿ ಹೇರುವದಿಲ್ಲ. ಒಂದು "ಹೌದು" ಎಂಬುದು ಒಂದು "ಇಲ್ಲ" ಎಂಬುದನ್ನು ಒಳಗೊಂಡಿರುವುದು. ಒಂದು "ಇಲ್ಲ" ಎಂಬುದು ಒಂದು "ಹೌದು" ಎಂಬುದನ್ನು ಒಳಗೊಂಡಿರುವುದು. ನಾವು ಅದನ್ನು ಸಂಪಾದಿಸಲಾರೆವು, ಆದರೆ ನಾವು ಅದನ್ನು ತಿರಸ್ಕರಿಸಬಹುದು. ಕೃಪೆಯು ಮಿತಿಮೀರಿದ ಸರಳತೆಯೂ ಸಂಪೂರ್ಣ ಅಸಂಬದ್ಧತೆಯೂ, ಅಸಂಬದ್ಧ ಪ್ರತಿಭೆಯೂ ಮತ್ತು ಶರತ್ತುಗಳಿಂದ ... *ಕೂಡಿದ್ದೂ ಆಗಿರುತ್ತದೆ!* ಯೇಸುವು ನಿನಗಾಗಿ ವ್ಯರ್ಥವಾಗಿ ಸಾಯುವಂತೆ ಬಿಡಬೇಕು! ನಮಗಾಗಿ ದೇವರು ಮಾಡದ ಸಂಗತಿಗಳು ಇರುವವು ಯಾಕಂದರೆ ಹಾಗೆ ಮಾಡುವಂತೆ ಆತನನ್ನು ಬಿಡುವದಿಲ್ಲ. ಆತನನ್ನು ಆಲಿಸುವವರೆಗೆ ದೇವರು ನಮ್ಮೊಂದಿಗೆ ಮಾತಾಡುವದಿಲ್ಲ. ದೇವರ ಕೃಪೆಗೆ ಅನುದಿನವೂ ಉತ್ತರ ಕೊಡಿರಿ.

***ಬನ್ನಿರಿ, ನನ್ನೊಂದಿಗೆ ನಡೆಯಿರಿ.***

---

ಟಿಪ್ಪಣಿ

[1]Michael P. Green, ed., *Illustrations for Biblical Preaching* (Grand Rapids, Mich.: Baker Book House, 1989), 377.

© 2009 Truth for Today